ಶ್ರೀ ಬಿ. ಹುಚ್ಚೇಗೌಡರು.—ಹೇಗಾದರೂ ಆಗಲಿ ಒಂದೇ ಮುನಿಸಿಪಾಲಿಟಿ ಮಾಡುವುದರಿಂದ ಎಲ್ಲರಿಗೂ ಅನುಕೂಲವಾಗುತ್ತಿದೆಯಲ್ಲವೇ ?

ಮಾನ್ಯ ಶ್ರೀ ಆರ್ ಚೆನ್ನಿಗರಾಮಯ್ಯನವರು.—ಅದು ಅಭಿಪ್ರಾಯದ ವಿಷಯ.

Improvement of Water Supply to Shimoga Town.

*Q.—180. **Sri Kadidal MANJAPPA** (Shimoga District-General).—Will the Government be pleased to state :—

(a) whether they have accorded sanction to the scheme of improving the water supply to Shimoga Town ;

(b) the date on which the sanction was accorded ;

(c) the steps they have taken to implement the scheme ?

A.—**The Hon'ble Sri R. CHENNIGARAMIAH** (Minister for Local Self-Government).—(a) and (b) It has been decided to sanction an estimate for Rs. 8,19,060.

(c) A suitable grant will be sanctioned to the Municipality early next financial year.

ಶ್ರೀ ಕಡಿದಾಳ್ ಮಂಜಪ್ಪನವರು.— ಈ ಪ್ರಶ್ನೆ ಎಷ್ಟು ದಿವಸದಿಂದ ಸರ್ಕಾರದವರ ಪರಿಶೀಲನೆಯಲ್ಲಿದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—1949ನೆಯ ಇಸವಿಯಿಂದ.

ಶ್ರೀ ಕಡಿದಾಳ್ ಮಂಜಪ್ಪನವರು.—ಕಳೆದ ವರ್ಷ ಮಾನ್ಯ ಸಚಿವರು ಶಿವಮೊಗ್ಗಾಕ್ಕೆ ಬಂದಾಗ ಇದನ್ನು ಮಂಜೂರುಮಾಡಿಬಿಟ್ಟಿದ್ದೇವೆಂದು ಹೇಳಿದ್ದು ಜ್ಞಾಪಕದಲ್ಲಿದೆಯೇ ? ಅದು ಮಂಜೂರಾಗಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಮಂಜೂರಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಹಣ ಯಾವಾಗ ಒದಗಿಸುತ್ತೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು — ಹಣ ಒದಗಿಸಿದೆ. ಆದರೆ ಆ ಮುನಿಸಿಪಾಲಿಟಿಯವರು ಕೊಡಬೇಕಾದ ತವ ಭಾಗವನ್ನು ಸರ್ಕಾರದಿಂದ ಸಾಲ ತೆಗೆದುಕೊಂಡು ಕೊಡಬೇಕಾಗಿದೆ. ಸರ್ಕಾರದವರು ಆ ಸಾಲವನ್ನೂ ಕೊಡಬೇಕಾಗಿದೆಯಲ್ಲದೆ ಸರ್ಕಾರಿ ಗ್ಯಾರಂಟಿನ್ನೂ ಕೊಡಬೇಕು. ಹೀಗೆ ಮುನಿಸಿಪಾಲಿಟಿಯವರ ಭಾಗದ ಹಣವನ್ನು ಸರ್ಕಾರದವರು ಕೊಡಬೇಕಾಗಿ ಬಂದು ಒಟ್ಟು ಅಂದಾಜು ಮೊಬಲಗನ್ನೂ ಒಂದೇ ಸಾರಿ ಡಿಪಾಜಿಟ್ ಮಾಡಬೇಕಾದ ಸಮಸ್ಯೆಯನ್ನು ಸಂಬಂಧಪಟ್ಟ ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಮುನಿಸಿಪಾಲಿಟಿಗೆ ಹೀಗೆ ಸಾಲ ಕೊಡುವ ವಿಷಯಕ್ಕೂ ತಾವು ಬಡ್ಡಿ ಹಾಕುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗಿದ್ದು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಎಷ್ಟು ದರ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸೇಕಡ 5 ರಂತೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ನಾಲ್ಕು ರೂಪಾಯಿನಂತೆ ಬೇರೆ ಕಡೆ ಕೊಟ್ಟಿಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಹಿಂದಿನ ಕಾಲದಲ್ಲಿ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಮುಂದಿನ ಸಾಲಿನಲ್ಲಿ ಕೈಕೊಳ್ಳುತ್ತೀರೆಂದರೆ ಯಾವ ಸಾಲಿನಲ್ಲಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದೇ ಮಾರ್ಚಿ ತಿಂಗಳು ಆಖೈರಾದ ಮೇಲೆ ಮುಂದಿನ ಸಾಲು ಪ್ರಾರಂಭವಾಗುತ್ತೆ.

ಶ್ರೀ ಎಸ್. ಕರಿಯಪ್ಪನವರು.— ಈ ಸಲದ ಬಜೆಟ್ಟಿನಲ್ಲಿ ಅದನ್ನು ಸೇರಿಸಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಿಂದೆಯೇ ಸೇರಿಸಿದೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ–ಜನರಲ್).—ಸೇಕಡ 5ರಂತೆ ಬಡ್ಡಿ ಹಾಕುವುದು ಬಹಳ ಜಾಸ್ತಿಯಲ್ಲವೇ? ಅದನ್ನು ಕಡಿಮೆಮಾಡುವುದಕ್ಕಾಗುತ್ತದೆಯೇ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗುವುದಿಲ್ಲ.

Formation of Industrial Board at Harihar.

*Q.—**209**. **Sri G. VEERAPPA** (Chitaldrug District—General).—

Will the Government be pleased to state :—

(*a*) whether they intend constituting an Industrial Town Board at Harihar; if so, its constitution and scope of work and the object ;

(*b*) the opinion of the Harihar Town Municipal Council in this respect;

(*c*) the number of industrial concerns that come under the Town Board as at present ?

A.—**The Hon'ble Sri R. CHENNIGARAMIAH** (Minister for Local Self-Government).—

(*a*) Government in their Order No. L. 1589-906—Ml. 161-47-2, dated 16th April 1948, have passed orders regarding the formation of an Industrial Town Board for Harihar in Chitaldrug District.